ಆಜ್ಞೆಯನ್ನು ಮಾಡುತ್ತೀರಿ ? ಈ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ನೀಡಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ನನ್ನ ನೋಟೀಸ್ ಸಹ ಮೇಲ್ಕಂಡಂತೆ ಇದೆ. ಅದನ್ನು ಓದಿ ಹೇಳುತ್ತೇನೆ.—

ಸರ್ಕಾರವು ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೆ ತಂದಿದ್ದರೂ ಸಹ, ಅನೇಕ ವರ್ಷಗಳಿಂದ ಗ್ರಾಮ ಪಂಚಾಯಿತಿಗಳಲ್ಲಿ ನೌಕರರಾಗಿ ಕೇವಲ 20.30.50 ರೂಪಾಯಿಗಳ ಮಾಸಿಕ ವೇತನದಿಂದ ಕೆಲಸ ಮಾಡುತ್ತಿದ್ದವರ ವೇತನವನ್ನು ಹೆಚ್ಚಿಸುವ ಬದಲು ಮೈಸೂರು ವಿಭಾಗಾಧಿಕಾರಿಗಳಪರು ತಮ್ಮ ಆದೇಶ ಸಂಖ್ಯೆ ವಿ.ಪಿ.ಸಿ. ಇ.ಸಿ.ಬಿ.ಶಿ, 85-86 ತಾರೀಖು 23-5-1985ರಂತೆ 1969ರ ನಂತರ ನೇಮಕಾತಿ ಹೊಂದಿದ ಎಲ್ಲ ನೌಕರರನ್ನು ಸೇವೆಯಿಂದ ವಿಮುಕ್ತಿಗೊಳಿಸಲು ಆಜ್ಞೆ ನೀಡಿದುದು ದುರ ದೃಷ್ಟಕರ. ಎಲ್ಲ ನೌಕರರಿಗೂ 1977, 1982ರ ವೇತನ ಶ್ರೇಣಿ ನೀಡುವ ಬದಲು ಕೇವಲ ಗೋಕರ್ಣ ಪಂಚಾಯಿತಿಗೆ ಮಾತ್ರ ಈ ಸೌಲಭ್ಯ ನೀಡಿದುದು ತೀರ ಅನ್ಯಾಯ. ಈ ತಾರತಮ್ಯದ ಕುರಿತು ಸೃಷ್ಟೀಕರಣ ನೀಡಬೇಕು. ಈಗ ಹೊರಡಿಸಿದ ವಿಭಾಗಾಧಿಕಾರಿಗಳ ಆಜ್ಞೆಯನ್ನು ಹಿಂತೆಗೆದುಕೊಂಡು ತೀರಾ ಕಷ್ಟದಲ್ಲಿರುವ ಬಹುತೇಕ ಹರಿಜನ ಗಿರಿಜನರೇ ಇರುವ ಈ ನೌಕರರಿಗೆ ನಿಯಮದಂತೆ ವೇತನ ನೀಡ ಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ, ಈ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ. ಮಾಹಿತಿ ಪಡೆದು ಸ್ಟೇಟ್‌ಮೆಂಟ್ ಮಾಡುತ್ತೇನೆ.

(10) ಬ್ರಹ್ಮಾವರನ ತೋಟದ ಪಡುಕೆರೆಯಲ್ಲಿ ಸಮುದ್ರ ಕೊರೆತ.

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ಮತದಾರ ಕ್ಷೇತ್ರದ ತೋಟದ ಪಡುಕೆರೆಯಲ್ಲಿ ಸಮುದ್ರ ಕೊರೆತವು ಪ್ರಾರಂಭವಾಗಿದ್ದು ಈಗಾಗಲೇ ತೋಟಗಳು ಸಮುದ್ರದ ಪಾಲಾಗಿವೆ, ಹಾಗಾಗಿ ಈ ವಿಭಾಗದಲ್ಲಿ ಸಮುದ್ರಕ್ಕೆ ತಡೆಗೋಡೆಯನ್ನು ನಿರ್ಮಿಸಲು ತಕ್ಷಣ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಅನಾಹುತಕ್ಕೆ ಈಡಾದವರಿಗೆ ಪರಿಹಾರವನ್ನು ಕೂಡಲೇ ಒದಗಿಸ ಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನಾ ಒತ್ತಾಯಿಸುತ್ತಿದ್ದೇನೆ.

ಶ್ರೀ ಪಿ. ಜೆ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ನನಗೆ ಇದರ ಬಗ್ಗೆ ತಿಳಿಸುವುದಕ್ಕೆ ಹೇಳಿದ್ದಾರೆ. ಏನೆಂದರೆ, ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆಂದು ಈ ಸದನಕ್ಕೆ ತಿಳಿಸಬೇಕೆಂದು ನನಗೆ ಹೇಳಿದ್ದಾರೆ. ಆದರಂತೆ ನಾನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಇದನ್ನು ತಿಳಿಸುತ್ತಿದ್ದೇನೆ.

1-30 p.m.

(11) ರಾಜ್ಯದ ಕೆಲವು ಕಾಲೇಜುಗಳಲ್ಲಿ ಪಿ.ಯು.ಸಿ ಅಂಕಗಳ ಪಟ್ಟಿ ಒದಗಿಸದಿರುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ರಾಜ್ಯದ ಹಲವಾರು ಕಾಲೇಜುಗಳಲ್ಲಿ, ಜೂನಿಯರ್ ಕಾಲೇಜುಗಳಲ್ಲಿ ಪಿ.ಯು.ಸಿ. ಫಲಿತಾಂಶ ತಡೆಹಿಡಿಯಲಾಗಿದೆ. ಪಿ.ಯು.ಸಿ. ಬೋರ್ಡ್ ನವರು ಈ ಫಲಿತಾಂಶವನ್ನು ತಡೆಹಿಡಿದ ಕಾರಣ ಏನು.

ಅಧ್ಯಕ್ಷರು.—ನೀವು ನೋಟೀಸ್ ಕೊಟ್ಟ ಪ್ರಕಾರ ಓದಿ. ಬೇರೆ ಏನು ಒದಬಾರದು. ನಿಮ್ಮಲ್ಲಿ ಒಂದು ನೋಟೀಸ್ ಕಾಪಿ ಇರಬೇಕಲ್ಲ, ಇಲ್ಲದೇ ಹೋದರೆ ಅವರಿಗೆ ಒಂದು ನೋಟೀಸನ್ನು ಕೊಡಿ.

ಶ್ರೀ ಕೆ, ಪ್ರತಾಪಚಂದ್ರ ಶೆಟ್ಟಿ.—ಪಿ,ಯು,ಸಿ, ಬೋರ್ಡಿನ ಮಾರ್ಕ್ಸ್ ಕಾರ್ಡ್ ಬಾರದ ಕುರಿತು.

ರಾಜ್ಯದ ಹಲವಾರು ಜೂನಿಯರ್ ಕಾಲೇಜು ಮತ್ತು ಕಾಲೇಜುಗಳಿಗೆ ಪಿ.ಯು.ಸಿ. ಬೋರ್ಡ್ ನಿಂದ ಮಾರ್ಕ್ಸ್ ಕಾರ್ಡ್ ಮತ್ತು ಫಲಿತಾಂಶಗಳು ಬರದೇ ವಿದ್ಯಾರ್ಥಿನಿಯರಿಗೆ ತಮ್ಮ ಮುಂದಿನ ವ್ಯಾಸಂಗಕ್ಕೆ ಹೋಗಲು ಬಹಳಷ್ಟು ಕಷ್ಟಪಡುತ್ತಿರುವ ಕುರಿತು, ಬಹಳಷ್ಟು ಮನವಿಗಳು ಈಗಾಗಲೇ ಬಂದಿರುವುದರಿಂದ ಈ ವಿಚಾರವನ್ನು ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಮತ್ತು.....

ಅಧ್ಯಕ್ಷರು.—ಮತ್ತು ಎಂಬುದು ಅಲ್ಲಿ ಇಲ್ಲ, ಸಾಕು ಕುಳಿತುಕೊಳ್ಳಿ. ಬಂಗಾರಪ್ಪನವರೇ ನೀವೆ ಅವರಿಗೆ ಸ್ವಲ್ಪ ಹೇಳಿ, ಇದು ಸರಿಯಲ್ಲ. ಪ್ರತಾಪಚಂದ್ರಶೆಟ್ಟಿಯವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಪ್ರತಪಚಂದ್ರಶೆಟ್ಟಿ.—ಅಧ್ಯಕ್ಷರೇ.....

ಅಧ್ಯಕ್ಷರು.—ಬಂಗಾರಪ್ಪನವರೇ, ಸ್ವಲ್ಪ ದಯವಿಟ್ಟು ಅವರಿಗೆ ಹೇಳಿ. ನೀವು ಕುಳಿತುಕೊಳ್ಳಿ